ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 25-01-1980.

# *ಬಿಂದು(ಜ್ಞಾನಸಿಂಧು ಪರಮಾತ್ಮ)ನೊಂದಿಗೆ ಬಿಂದು(ಆತ್ಮ)ನ ಮಿಲನ*

(बिन्दु (ज्ञान सिन्धु परमात्मा) का बिन्दु (आत्मा) से मिलन)

ಇಂದು ಬಾಪ್‌ದಾದಾರವರು ಮಿಲನ ಮಾಡುವುದಕ್ಕಾಗಿ ಬಂದಿದ್ದಾರೆ. ಮುರಳಿಯನ್ನಂತು ಬಹಳ ಕೇಳಿದ್ದೀರಿ. ಸರ್ವಮುರಳಿಗಳ ಸಾರವು ಒಂದೇ ಶಬ್ದವಾಗಿದೆ- "ಬಿಂದು" ಇದರಲ್ಲಿ ಪೂರ್ಣವಿಸ್ತಾರವು ಸಮಾವೇಶವಾಗಿದೆ. ಬಿಂದುವಂತು ಆಗಿದ್ದೀರಲ್ಲವೆ? ಬಿಂದುವಾಗುವುದು, ಬಿಂದು ತಂದೆಯನ್ನು ನೆನಪು ಮಾಡುವುದು ಮತ್ತು ಏನೆಲ್ಲವೂ ಕಳೆಯಿತೋ ಅದಕ್ಕೆ ಬಿಂದುವನ್ನಿಡುವುದು. ಇದು ಸಹಜವಾಗಿದೆಯೆಂಬ ಅನುಭವ ಆಗುತ್ತದೆಯಲ್ಲವೆ? ಇದು ಅತಿಸೂಕ್ಷ್ಮ ಮತ್ತು ಅತಿಶಕ್ತಿಶಾಲಿಯಾಗಿದೆ. ಇದರಿಂದ ತಾವೆಲ್ಲರೂ ಸೂಕ್ಷ್ಮ ಫರಿಶ್ತೆಗಳಾಗಿ, ಮಾಸ್ಟರ್ ಸರ್ವಶಕ್ತಿವಂತನಾಗಿ ಪಾತ್ರವನ್ನಭಿನಯಿಸುತ್ತಿದ್ದೀರಿ. ಸಾರವಂತು ಸಹಜವಲ್ಲವೆ ಅಥವಾ ಕಷ್ಟವೆನಿಸುತ್ತದೆಯೇ? ವಿದೇಶದವರು ಏನೆಂದು ತಿಳಿಯುತ್ತೀರಿ? ಸಹಜವೇ ಆಗಿದೆಯೇ? ಅಥವಾ ಡಬಲ್ ವಿದೇಶದವರಿಗೆ ಡಬಲ್ ಸಹಜವೇ? ಈಗಂತು ಬಾಪ್‌ದಾದಾರವರು ಸಾರಸ್ವರೂಪವನ್ನು ನೋಡಲು ಬಯಸುತ್ತಾರೆ.

ಪ್ರತಿಯೊಂದು ಮಗುವು ಇಂತಹ ದಿವ್ಯದರ್ಪಣವಾಗಬೇಕು, ಆ ದರ್ಪಣದ ಮೂಲಕ ತನ್ನ ಮೂರೂ ಕಾಲಗಳೂ ಸಹ ಪ್ರತಿಯೊಬ್ಬ ಮನುಷ್ಯಾತ್ಮನಿಗೆ ಕಾಣಿಸಬೇಕು. ಇಂತಹ ತ್ರಿಕಾಲದರ್ಶಿಯನ್ನಾಗಿ ಮಾಡಿಸುವಂತಹ ದರ್ಪಣವಾಗಿದ್ದೀರಾ? ಯಾವ ದರ್ಪಣದಿಂದ 'ಏನಾಗಿದ್ದೆನು' ಮತ್ತು 'ಈಗ ಏನಾಗಿದ್ದೇನೆ' ಮತ್ತು 'ಭವಿಷ್ಯದಲ್ಲಿ ಏನು ಸಿಗುವುದಿದೆ' – ಈ ಮೂರೂ ಕಾಲಗಳು ಸ್ಪಷ್ಟವಾಗಿ ಕಾಣಿಸುವುದರಿಂದ, ಸಹಜವಾಗಿಯೇ ತಂದೆಯಿಂದ ಆಸ್ತಿಯನ್ನು(ವಾರಸತ್ವ) ತೆಗೆದುಕೊಳ್ಳುವುದಕ್ಕಾಗಿ ಆಕರ್ಷಿತರಾಗಿ ಬರುತ್ತಾರೆ. ಯಾವಾಗ ಸಾಕ್ಷಾತ್ಕಾರವಾಗುತ್ತದೆಯೋ ಆಗ ತಿಳಿಯುತ್ತಾರೆ ಮತ್ತು ಸ್ಪಷ್ಟವಾಗಿ ಅನುಭವವಾಗುವಷ್ಟು ತಿಳಿದುಕೊಳ್ಳುತ್ತಾರೆ. ಆಗ ಅನೇಕ ಜನ್ಮಗಳ ಬಾಯಾರಿಕೆ ಅಥವಾ ಅನೇಕ ಜನ್ಮಗಳ ಆಸೆಯಾದ- ಮುಕ್ತಿಯಲ್ಲಿ ಹೋಗುವ ಅಥವಾ ಸ್ವರ್ಗದಲ್ಲಿ ಹೋಗುವ ಆಸೆಯು ಈಗ ಪೂರ್ಣವಾಗುವುದಿದೆ. ಎಂದು ಅನುಭವ ಮಾಡಿಕೊಳ್ಳುತ್ತಾರೋ, ತಿಳಿಯುತ್ತಾರೋ ಆಗ ಸಹಜವಾಗಿಯೇ ಆಕರ್ಷಿತವಾಗಿ ಬರುತ್ತಾರೆ. ಎರಡು ಪ್ರಕಾರದ ಆತ್ಮರಿದ್ದಾರೆ. ಭಕ್ತಾತ್ಮರು ಪ್ರೀತಿಯಲ್ಲಿ ಲೀನವಾಗಲು ಬಯಸುತ್ತಾರೆ ಮತ್ತು ಕೆಲ ಆತ್ಮರು ಜ್ಯೋತಿಯಲ್ಲಿ ಲೀನವಾಗಲು ಬಯಸುತ್ತಾರೆ. ಇಬ್ಬರೂ ಲೀನವಾಗುವುದಕ್ಕೇ ಬಯಸುತ್ತಾರೆ. ಇಂತಹ ಆತ್ಮರಿಗೆ ಸೆಕೆಂಡಿನಲ್ಲಿ ತಂದೆಯ ಪರಿಚಯ, ತಂದೆಯ ಮಹಿಮೆ ಮತ್ತು ಪ್ರಾಪ್ತಿಯನ್ನು ತಿಳಿಸಿ, ಸಂಬಂಧದ ಲವಲೀನ ಸ್ಥಿತಿಯ ಅನುಭವವನ್ನು ಮಾಡಿಸಬೇಕು. ಲವಲೀನರಾದಾಗ ಸಹಜವಾಗಿ ಲೀನವಾಗುವ ರಹಸ್ಯವನ್ನೂ ತಿಳಿದುಬಿಡುತ್ತಾರೆ. ಅಂದಾಗ ವರ್ತಮಾನ ಸಮಯದಲ್ಲಿ 'ಲವಲೀನ' ರಾಗುವ ಅನುಭವ ಮಾಡಿಸಬೇಕಾಗಿದೆ. ಭವಿಷ್ಯ ಲೀನದ ಮಾರ್ಗವನ್ನೂ ತಿಳಿಸಿರಿ, ಆಗ ಸಹಜವಾಗಿಯೇ ಪ್ರಜೆಗಳನ್ನು ತಯಾರು ಮಾಡುವ ಕಾರ್ಯವಾಗಿಬಿಡುತ್ತದೆ. ಇಂತಹ ತ್ರಿಕಾಲದರ್ಶಿಯನ್ನಾಗಿ ಮಾಡುವ ದಿವ್ಯದರ್ಪಣವಾಗಿದ್ದೀರಾ? ಇಂತಹ ದಿವ್ಯದರ್ಪಣದಲ್ಲಿ ತಮ್ಮ ಪುರುಷಾರ್ಥದ ಪ್ರತೀಸಮಯದ ಫಲಿತಾಂಶದ ಚಿತ್ರವು ಸೆಳೆಯುತ್ತದೆ. ಅದರಲ್ಲಿ ಸಮರ್ಥವಾಗಿದ್ದೀರಾ ಅಥವಾ ವ್ಯರ್ಥದಲ್ಲಿ ಹೋಗಿಬಿಟ್ಟಿರಾ. ವ್ಯರ್ಥದ ಭಾವಚಿತ್ರ ಮತ್ತು ಸಮರ್ಥದ ಭಾವಚಿತ್ರವೆರಡೂ ಕಾಣಿಸುತ್ತದೆ. ಸಮರ್ಥದ ಭಾವಚಿತ್ರವೇನಾಗಿರುತ್ತದೆ- ಅದು ಮಾಸ್ಟರ್ ಸರ್ವಶಕ್ತಿವಂತ ಅಥವಾ ಹೃದಯಸಿಂಹಾಸನಾಧಿಕಾರಿ. ವ್ಯರ್ಥದ ಭಾವಚಿತ್ರವೇನಾಗಿರುತ್ತದೆ- ಸದಾ ಯುದ್ಧದ ರೂಪದಲ್ಲಿ ಯೋಧನ ಭಾವಚಿತ್ರವಿರುತ್ತದೆ. ಸಿಂಹಾಸನಾಧಿಕಾರಿ ಆಗಿರುವುದಿಲ್ಲ. ಆದರೆ ಯುದ್ಧ ಸ್ಥಳದಲ್ಲಿ ನಿಂತಿರುವುದಾಗಿರುತ್ತದೆ. ಸಿಂಹಾಸನಾಧಿಕಾರಿ ಸಫಲತಾಮೂರ್ತಿ ಮತ್ತು ಯುದ್ಧ ಸ್ಥಳದಲ್ಲಿ ನಿಂತಿರುವವರು ಪರಿಶ್ರಮ ಪಡುವ ಮೂರ್ತಿಯಾಗಿರುತ್ತಾರೆ. ಚಿಕ್ಕಮಾತಿಯನಲ್ಲಿಯೂ ಸಹ ಪರಿಶ್ರಮವನ್ನೇ ಪಡುತ್ತಿರುತ್ತಾರೆ. ಅವರು(ಸಮರ್ಥಆತ್ಮ)ಸ್ಮೃತಿ

ಸ್ವರೂಪರಾಗಿರುತ್ತಾರೆ, ಅವರು ಚಿಂತನೆಯ ಸ್ವರೂಪರಾಗಿರುತ್ತಾರೆ. ಈ ರೀತಿ ತಮ್ಮ ಸ್ವರೂಪವನ್ನೂ ನೋಡುತ್ತೀರಿ ಮತ್ತು ಅನ್ಯರಿಗೂ ಮೂರೂಕಾಲಗಳ ದರ್ಶನವನ್ನು ಮಾಡಿಸುತ್ತೀರಿ. ಇಂತಹ ದಿವ್ಯದರ್ಪಣವಾಗಿರಿ. ತಿಳಿಯಿತೆ.

ಇಂದು ಡಬಲ್ ವಿದೇಶದವರು ಮತ್ತು ಗುಜರಾತಿನವರೊಂದಿಗೆ ಮಿಲನ ಮಾಡಬೇಕು. ಇಬ್ಬರ ನರ್ತನದ ರಾಶಿಯು ಒಂದೇ ಆಗಿದೆ. ಅವರೂ ನರ್ತಿಸುತ್ತಾರೆ ಮತ್ತು ಇವರೂ ಚೆನ್ನಾಗಿ ನರ್ತಿಸುತ್ತಾರೆ. ಗುಜರಾತಿನವರೂ ಸಹ ಪ್ರೇಮ ಸ್ವರೂಪವಾಗಿದ್ದಾರೆ ಮತ್ತು ಡಬಲ್ ವಿದೇಶದವರೂ ಪ್ರೀತಿಯ ಅನುಭವದ ಆಧಾರದ ಮೇಲೆ ಓಡುತ್ತಾರೆ. ಜ್ಞಾನದ ಜೊತೆಜೊತೆಗೆ ಪ್ರೀತಿಯು ಸಿಕ್ಕಿದೆ. ಆ ಆತ್ಮಿಕ ಪ್ರೀತಿಯೇ ಪ್ರಭುವಿನವರನ್ನಾಗಿ ಮಾಡಿತು. ಡಬಲ್ ಪ್ರೀತಿಯು ಸಿಗುತ್ತದೆ. ಒಂದು ಬಾಬಾರವರ ಪ್ರೀತಿ, ಇನ್ನೊಂದು ಪರಿವಾರದ ಪ್ರೀತಿ, ಅಂದಮೇಲೆ ಪ್ರೀತಿಯ ಅನುಭವವು ಪತಂಗವನ್ನಾಗಿ ಮಾಡಿದೆ. ಪ್ರೀತಿಯು ವಿದೇಶದವರಿಗಾಗಿ ಅಯಸ್ಕಾಂತದ ಕಾರ್ಯವನ್ನು ಮಾಡುತ್ತದೆ, ನಂತರ ಕೇಳುವ ಅಥವಾ ಸಾಯುವುದಕ್ಕಾಗಿಯೂ ತಯಾರಾಗಿ ಬಿಡುತ್ತಾರೆ. ಈ ರೀತಿ ಸಾಯುವುದಂತು ಪ್ರಿಯವಲ್ಲವೆ. ಈ ಸಾಯುವುದು ಅರ್ಥಾತ್ ಸ್ವರ್ಗದಲ್ಲಿ ಹೋಗುವುದು. ಆದ್ದರಿಂದ ಸತ್ತಿರುವವರಾಗಿ ಸ್ವರ್ಗಸ್ಥರಾದರೆಂದು ಹೇಳುತ್ತಾರೆ. ಆ ರೀತಿ ಸಾಯುವವರು ಹೋಗುವುದಿಲ್ಲ. ಆದರೆ ಸಂಗಮದಲ್ಲಿ ಯಾರು ಸತ್ತರು ಅವರು ಸ್ವರ್ಗದಲ್ಲಿ ಹೋದರು. ಇದರ ಕಾಪಿ ಮಾಡುತ್ತಾ, ದೇಹದಿಂದ ಸಾಯುವವರಿಗಾಗಿ ವಾರ್ತಾಪತ್ರಿಕೆಯಲ್ಲಿ ಹಾಕಿಸುತ್ತಾರೆ- ಇಂತಹವರು ಸ್ವರ್ಗಸ್ಥರಾದರು. ಅಂದಮೇಲೆ ಸಾಯುವುದು ಇಷ್ಟವಿದೆಯಲ್ಲವೆ! ತಮ್ಮ ಇಚ್ಛೆಯಿಂದ ಸತ್ತಿದ್ದೀರಲ್ಲವೆ, ಫೋರ್ಸ್‌ನಿಂದ ಅಲ್ಲತಾನೆ. ಇಡೀ ಸಭೆಯು ಮರುಜೀವಾ ಆಗಿರುವವರಾಗಿದ್ದಾರೆ. ಎಲ್ಲಿಯಾದರೂ ಹಳೆಯ ಪ್ರಪಂಚದಲ್ಲಿ ಶ್ವಾಸವು ನಿಂತಿಲ್ಲವಲ್ಲವೆ. ಇದೇ ಅದ್ಭುತವಾಗಿದೆ. ಇಲ್ಲಿ ಸತ್ತಿರುವವರೂ ನಗುತ್ತಾರೆ. (ಬಾಬಾರವರ ಮಾತುಗಳಿಂದ ವಿದೇಶದವರು ನಗುತ್ತಿದ್ದರು)

ತಮ್ಮ ಕ್ರಿಶ್ಚಿಯನ್ ತತ್ವದಲ್ಲಿಯೂ ಇದೆ- ಶವದಲ್ಲಿ ಬಂದು ಪ್ರಾಣವನ್ನು ಹಾಕುತ್ತಾರೆ. ಮೊದಲು ಶವದಂತೆ ಆಗಿದ್ದಿರಿ, ನಂತರ ಪ್ರಾಣವು ಬಂದಿತು, ಹೊಸ ಜನ್ಮವಾಯಿತು. ಈ ಸಾಯುವುದರಲ್ಲಿ ಮಜಾ ಇದೆ, ಭಯವಿಲ್ಲ.

**ದಾದಿಯವರೊಂದಿಗೆ.**

ವರ್ತಮಾನ ಸಮಯದಲ್ಲಿ ವತನದಲ್ಲಿ ಮಹಾವೀರರ ಸಭೆಯಾಗುತ್ತದೆ. ಏಕೆ ಆಗುತ್ತದೆ ಎಂಬುದನ್ನು ತಿಳಿದಿದ್ದೀರಾ? ಇತ್ತೀಚೆಗೆ ಬಾಪ್‌ದಾದಾರವರು ಸ್ಥಾಪನೆಯಲ್ಲಿ ಬ್ರಹ್ಮಾರವರ ಸಂಪೂರ್ಣ ಸ್ವರೂಪದ ಮೂಲಕ ಸಾಕ್ಷಾತ್ಕಾರವನ್ನು ಮಾಡಿಸುವ ಸೇವೆಯನ್ನು ಹೇಗೆ ತೆಗೆದುಕೊಂಡರು, ಹಾಗೆಯೇ ವರ್ತಮಾನದಲ್ಲಿ ಅಷ್ಟರತ್ನಗಳಿಂದ ಇಷ್ಟರತ್ನಗಳು, ಅವರನ್ನೂ ಶಕ್ತಿಯ ರೂಪದಲ್ಲಿ ಜೊತೆಜೊತೆಯಲ್ಲಿ ಸಾಕ್ಷಾತ್ಕಾರ ಮಾಡಿಸುವ ಸೇವೆಯನ್ನು ಮಾಡಿಸುತ್ತಾರೆ. ಸ್ಥೂಲ ಶರೀರದ ಮೂಲಕ ಸಾಕಾರಿ ಈಶ್ವರೀಯ ಸೇವೆಯಲ್ಲಿ ವ್ಯಸ್ತವಾಗಿರುತ್ತೀರಿ. ಆದರೆ ವರ್ತಮಾನದ ಅನನ್ಯ ಶ್ರೇಷ್ಠಾತರದು ಡಬಲ್‌ಸೇವೆಯು ನಡೆಯುತ್ತಿದೆ. ಹೇಗೆ ಬ್ರಹ್ಮಾರವರ ಮೂಲಕ ಸ್ಥಾಪನೆಯ ವೃದ್ಧಿಯಾಯಿತು, ಹಾಗೆಯೇ ಈಗ ಶಿವಶಕ್ತಿ ಕಂಬೈಂಡ್ ಸಾಕ್ಷಾತ್ಕಾರದ ಮೂಲಕ ಸಾಕ್ಷಾತ್ಕಾರ ಮತ್ತು ಸಂದೇಶವು ಸಿಗುವ ಕಾರ್ಯವು ಸೂಕ್ಷ್ಮ ಶರೀರದ ಮೂಲಕವೂ ಆಗುತ್ತಿದೆ. ಅಂದಮೇಲೆ ಬಾಪ್‌ದಾದಾರವರ ಈ ಸೇವೆಯಲ್ಲಿಯೂ ಸಹ ಅನನ್ಯ ಮಕ್ಕಳನ್ನು ಸಹಯೋಗಿಯನ್ನಾಗಿ ಮಾಡುತ್ತಾರೆ. ಆದ್ದರಿಂದ ಸೂಕ್ಷ್ಮ ಸೇವೆಯ ಪ್ರತ್ಯಕ್ಷ ಯೋಜನೆಯ ಕಾರಣದಿಂದ ಅಲ್ಲಿ ಸಭೆಯಾಗುತ್ತದೆ. ಆದ್ದರಿಂದ ಮಹಾವೀರ ಮಕ್ಕಳು ಕರ್ಮವನ್ನು ಮಾಡುತ್ತಿದ್ದರೂ, ಯಾವುದೇ ಕರ್ಮ ಬಂಧನದಿಂದ ಮುಕ್ತ, ಸದಾ ಡಬಲ್‌ಲೈಟ್ ರೂಪದಲ್ಲಿರಬೇಕಾಗಿದೆ. ಬಾಬಾರವರು ಸೂಕ್ಷ್ಮ ವತನದಲ್ಲಿ ಇಮರ್ಜ್ ಮಾಡಿದರು, ಸೇವ ಮಾಡಿಸಿದರು - ಅದರ ಅನುಭೂತಿಯು ಮುಂದೆ ನಡೆದಂತೆ ಬಹಳ ಮಾಡುತ್ತೀರಿ. ಡಬಲ್ ಸೇವೆಯ ಪಾತ್ರವು ನಡೆಯುತ್ತಿದೆ. ಬಾಪ್ ದಾದಾರವರು ಅನನ್ಯ ಮಕ್ಕಳ ಸಂಘಟನೆಯ ಮೂಲಕ ಭಕ್ತರು ಮತ್ತುವಿಜ್ಞಾನಿಗಳಿಗೆ, ಇಬ್ಬರಿಗೂ ಟಚಿಂಗ್ ಮಾಡಿಸುವ ಸೇವೆಯನ್ನು ಮಾಡಿಸುತ್ತಿರುತ್ತಾರೆ. ಅದರಲ್ಲಿ ಅನನ್ಯ ಭಕ್ತಿಯ ಸಂಸ್ಕಾರವನ್ನು ತುಂಬಿಕೊಳ್ಳುತ್ತಿದ್ದಾರೆ, ಅದನ್ನು ಭಕ್ತಿಮಾರ್ಗದಲ್ಲಿ ಅರ್ಧಕಲ್ಪದವರೆಗೂ ನಡೆಸುತ್ತಿರುತ್ತಾರೆ.

ಮತ್ತು ವಿಜ್ಞಾನಿಗಳನ್ನು ಪರಿವರ್ತನೆ ಮಾಡುವ ಮತ್ತು ರಿಫೈನ್ ಮಾಡುವ ಸಾಧನವನ್ನಾಗಿ ಮಾಡುವುದರಲ್ಲಿ ನಡೆಸುತ್ತಾರೆ. ಯಾವ ಸಾಧನವು ಹೇಗೆ ಸಂಪನ್ನವಾಗುತ್ತದೆಯೋ, ಅದರ ಸುಖವು ಸಂಪೂರ್ಣ ಆತ್ಮರು ತೆಗೆದುಕೊಳ್ಳುತ್ತಾರೆ. ಇವರು (ವಿಜ್ಞಾನಿ) ತೆಗೆದುಕೊಳ್ಳಲು ಸಾಧ್ಯವಿಲ್ಲ. ಅಂದಮೇಲೆ ಎರಡೂ ಕಾರ್ಯಗಳು ಸೂಕ್ಷ್ಮ ಸೇವೆಯ ಮೂಲಕ ಆಗುತ್ತಿದೆ. ತಿಳಿಯಿತೆ.

ಇಡೀ ದಿನದಲ್ಲಿ ಎಷ್ಟು ಸಮಯದವರೆಗೂ ಸೂಕ್ಷ್ಮ ವತನ ವಾಸಿಯಾಗಿ ಇರುತ್ತೀರಿ? ಅಥವಾ ಸ್ಥೂಲಸೇವೆಯು ಹೆಚ್ಚಾಗಿದೆಯೇ. ತಾವುಗಳು ಎಷ್ಟೇ ಬ್ಯುಜಿಯಾಗಿರುತ್ತೀರಿ, ತಂದೆಯಂತು ತನ್ನ ಕಾರ್ಯವನ್ನು ಮಾಡಿಸಿ ಬಿಡುತ್ತಾರೆ. ತಮ್ಮ ಸಂಪೂರ್ಣ ಆಕಾರದ ಅನುಭವ ಮಾಡಿದ್ದೀರಾ? ಹೇಗೆ ಸಾಕಾರ ಆಕಾರ ಆಗಿಬಿಟ್ಟಿದ್ದೀರಿ, ತಮ್ಮೆಲ್ಲರದೂ ಸಂಪೂರ್ಣ ಆಕಾರಿಸ್ವರೂಪವಿದೆ. ಅವರಲ್ಲಿ ಪ್ರತಿಯೊಬ್ಬರೂ ನಂಬರ್‌ವಾರ್ ಆಗಿ ಸಾಕಾರ ಆಕಾರವಾಗಿ ಬಿಡುತ್ತಾರೆ. ಆಕಾರದವರಾಗಿ ಸೇವೆ ಮಾಡುವುದು ಚೆನ್ನಾಗಿದೆಯೇ ಅಥವಾ ಸಾಕಾರ ಶರೀರದ ಪರಿವರ್ತನೆ ಮಾಡುವ ಸೇವೆಯನ್ನು ಮಾಡುವುದು ಚೆನ್ನಾಗಿದೆಯೇ, ಅಡ್ವಾನ್ಸ್ ಪಾರ್ಟಿಯಂತು ಸಾಕಾರ ಶರೀರದ ಪರಿವರ್ತನೆ ಮಾಡಿಕೊಂಡು ಸೇವೆಯನ್ನು ಮಾಡುತ್ತಿದ್ದಾರೆ. ಆದರೆ ಕೆಲಕೆಲವರ ಪಾತ್ರವು ಅಂತ್ಯದವರೆಗೂ ಸಾಕಾರಿ ಮತ್ತು ಆಕಾರಿರೂಪದ ಮೂಲಕವೂ ನಡೆಯುತ್ತದೆ. ತಮ್ಮ ಪಾತ್ರವೇನಾಗಿದೆ? ಕೆಲವರದು ಅಡ್ವಾನ್ಸ್ ಪಾರ್ಟಿಯ ಪಾತ್ರವಿದೆ, ಕೆಲವರದು ಅಂತಃವಾಹಕ ಶರೀರದ ಮೂಲಕ ಸೇವೆಯ ಪಾತ್ರವಿದೆ. ಇಬ್ಬರ ಪಾತ್ರಗಳ ಮಹತ್ವಿಕೆಯು ತಮ್ಮ-ತಮ್ಮದಾಗಿದೆ. ಫಸ್ಟ್-ಸೆಕೆಂಡ್ ಎನ್ನುವ ಮಾತಿಲ್ಲ. ವಿಭಿನ್ನ ಪಾತ್ರಗಳ ಮಹತ್ವಿಕೆಯಿದೆ. ಅಡ್ವಾನ್ಸ್ ಪಾರ್ಟಿಯದ ಕಾರ್ಯವೇನು ಕಡಿಮೆಯಿಲ್ಲ. ತಿಳಿಸಿದೆವಲ್ಲವೆ- ಅವರು ಉಮ್ಮಂಗ-ಉತ್ಸಾಹದಿಂದ ತಮ್ಮ ಯೋಜನೆಯನ್ನು ಮಾಡುತ್ತಿದ್ದಾರೆ. ಅಲ್ಲಿಯೂ ಹೆಸರುವಾಸಿಯಾಗಿದ್ದಾರೆ.

**ಅವ್ಯಕ್ತ ಬಾಪ್‌ದಾದಾರವರ ವಾರ್ತಾಲಾಪ.**

**ಪಾರ್ಟಿಯೊಂದಿಗೆ.**

ಎಲ್ಲರೂ ಸದಾ ಮಣಿಯ ಸಮಾನ ಹೊಳೆಯುತ್ತಿದ್ದೀರಾ? ಮಣಿಯು ಸದಾ ಹೊಳೆಯುತ್ತಿರುತ್ತದೆಯಲ್ಲವೆ? ಒಂದೊಂದು ಮಣಿಯ ಮೌಲ್ಯವು ಎಷ್ಟೊಂದಿದೆ. ಯಾರ ಮೌಲ್ಯವನ್ನು ಇಂದಿನ ಮನುಷ್ಯರೂ ಎಣಿಕೆ ಮಾಡಲು ಸಾಧ್ಯವಿಲ್ಲ ಏಕೆಂದರೆ ತಂದೆಯವರಾಗಿ ಬಿಟ್ಟಿದ್ದೀರಲ್ಲ. ಅವರು ಅಮೂಲ್ಯ ರತ್ನಗಳಾಗಿದ್ದಾರೆ. ಯಾರು ತಂದೆಯ ಮಕ್ಕಳಾಗಿಬಿಟ್ಟರೋ ಅವರು ಅಮೂಲ್ಯ ರತ್ನಗಳಾಗಿ ಬಿಟ್ಟರು. ಇಡೀ ವಿಶ್ವದಲ್ಲಿ ಸರ್ವ ಶ್ರೇಷ್ಠವಾದ ಆತ್ಮರಾಗಿಬಿಟ್ಟಿದ್ದೀರಿ. ಇನ್ನೂ ಖುಷಿಯಿರುತ್ತದೆಯೇ? ಹೇಗೆ ಶರೀರದ ಕರ್ತವ್ಯವು ಸದಾ ನೆನಪಿರುತ್ತದೆಯೋ, ಹಾಗೆಯೇ ಆತ್ಮದ ಕರ್ತವವನ್ನೆಂದಿಗೂ ಮರೆಯಬಾರದು. ಸಂಗಮಯುಗದ ಶ್ರೇಷ್ಠವಾದ ಭಾಗ್ಯವೇ ಆಗಿದೆ - ತಂದೆಯ ಅಮೂಲ್ಯ ರತ್ನಗಳಾಗುವುದು. ಈ ಭಾಗ್ಯವನ್ನು ಹೇಗೆ ಮರೆಯಲು ಸಾಧ್ಯ ಸೇವೆಯಲ್ಲಿ ಎಲ್ಲರೂ ಸಹಯೋಗವನ್ನು ಕೊಡುತ್ತಾರೆ. ಆಲ್‌ರೌಂಡ್ ಸೇವಾಧಾರಿಗಳಾಗಿದ್ದೀರಿ. ಸೇವೆಯ ಅವಕಾಶವು ಸಿಗುವುದೂ ಸಹ ಡ್ರಾಮಾದಲ್ಲಿ ಒಂದು ಲಿಫ್ಟ್ ಆಗಿದೆ. ಯಜ್ಞಸೇವೆಯನ್ನು ಎಷ್ಟು ಮಾಡುತ್ತೀರಿ, ಪ್ರಾಪ್ತಿಗಳ ಪ್ರಸಾದವು ಸ್ವತಹವಾಗಿಯೇ ಪ್ರಾಪ್ತಿಯಾಗುತ್ತದೆ, ನಿರ್ವಿಘ್ನವಾಗಿರುತ್ತೀರಿ. ಸದಾ ಸ್ಥೂಲ-ಸೂಕ್ಷ್ಮದಲ್ಲಿಯೂ ಸಹಯೋಗವಿರಲಿ. ಯಾರನ್ನೇ ಸಂತುಷ್ಟಪಡಿಸುವುದು ಎಲ್ಲದಕ್ಕಿಂತ ದೊಡ್ಡ ಸೇವೆಯಾಗಿದೆ. ಅತಿಥಿಯ ಸೇವೆಯನ್ನು ಮಾಡುವುದು ಎಲ್ಲದಕ್ಕಿಂತ ದೊಡ್ಡಭಾಗ್ಯವಾಗಿದೆ. ಹೇಳಿಕೆಯೂ ಇದೆ- ಅತಿಥಿಯು ಭಾಗ್ಯಶಾಲಿಯ ಮನೆಯಲ್ಲಿ ಬರುತ್ತಾರೆ.

2. ಎಲ್ಲರೂ ಮಾಯೆಯನ್ನು ತಿಳಿದಿದ್ದರೂ, ಮಾಯೆಯಿಂದ ತಿಳುವಳಿಕೆ ಇಲ್ಲದವರಾಗಿರುತ್ತೀರಾ? ಹೇಗೆ ದೇವತೆಗಳು 'ಮಾಯೆ' ಶಬ್ದವನ್ನು ತಿಳಿದಿರುವುದೇ ಇಲ್ಲ, ಅವರೊಂದಿಗೆ ಮಾಯೆಯೇನಾಗಿದೆ ಎಂದು ಕೇಳಿರಿ, ಆಗ ತಿಳುವಳಿಕೆ ಇಲ್ಲದವರಲ್ಲವೆ. ಇದೇ ರೀತಿ ತಾವು ಮಾಯೆಯನ್ನು ತಿಳಿದಿದ್ದರೂ “ಮಾಯೆ"ಯ ಯುದ್ಧದಿಂದ ತಿಳುವಳಿಕೆ ಇರದವರಾಗಿರಿ. ಮಾಯೆಯನ್ನು ಈ ರೀತಿ ಸಮಾಪ್ತಿ

ಮಾಡಿಬಿಡಬೇಕು- ಹೇಗೆಂದರೆ ಅದರ ಹೆಸರು-ಚಿಹ್ನೆಯ ಸಮಾಪ್ತಿಯಾಗಿ ಬಿಡಬೇಕು. ಮಾಯೆಯೆಂದಾದರೂ ಅತಿಥಿಯಂತು ಆಗುವುದಿಲ್ಲವೆ. ಬಾಗಿಲು ಬಂದ್ ಆಗಿದೆಯೇ? ಒಂದು ವೇಳೆ ಕೋಟೆಯು ಶಕ್ತಿಶಾಲಿಯಾಗಿ ಇದೆಯೆಂದರೆ ಶತ್ರುಗಳು ಬರುವುದಿಲ್ಲ. ಶ್ರೇಷ್ಠ ಸ್ಥಿತಿಯಲ್ಲಿರುವುದು ಅರ್ಥಾತ್ ಶ್ರೇಷ್ಠವಾದ ಗೋಡೆಯಾಗಿದೆ. ಎಂದಿಗೂ ಸಾಧಾರಣ ಸ್ಥಿತಿಗೆ ಬರಬಾರದು. ಯಾವಾಗ ಬಾಬಾರವರ ಮಕ್ಕಳಾಗಿದ್ದೀರಿ, ಅಂದಮೇಲೆ ತಂದೆಯವರಾಗುವುದು ಅರ್ಥಾತ್ ನನ್ನದು ಎನ್ನುವುದು ಸಮಾಪ್ತಿಯಾಗುವುದು. ಮೋಹದ ಉತ್ಪತ್ತಿಯ ಆಧಾರವಾಗಿದೆ - 'ನನ್ನದು'. ಯಾವಾಗ ನನ್ನದೆನ್ನುವುದು ಇರುವುದೇ ಇಲ್ಲವೆಂದರೆ ಮೋಹವೆಲ್ಲಿಂದ ಬರುತ್ತದೆ. ಯಾವಾಗ ತಮ್ಮನ್ನು ಅಲ್ಪಕಾಲದ ರಚಯಿತನೆಂದು ತಿಳಿಯುತ್ತೀರಿ, ಆಗ ವಿಕಾರಗಳ ಉತ್ಪತ್ತಿ ಯಾಗುತ್ತದೆ. ಸದಾ ಸಹೋದರ-ಸಹೋದರನ ಸ್ಮೃತಿಯಿರುತ್ತದೆಯೆಂದರೆ, ಯಾವುದೇ ವಿಕಾರಗಳ ಉತ್ಪನ್ನವಾಗಲು ಸಾಧ್ಯವಿಲ್ಲ.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 25-01-1980.

***ಬಿಂದು (ಜ್ಞಾನ ಸಿಂಧು ಪರಮಾತ್ಮ)ನೊಂದಿಗೆ ಬಿಂದು (ಆತ್ಮ)ನ ಮಿಲನ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಬಿಂದುವಾಗಿ, ಬಿಂದುವನ್ನು ನೆನಪು ಮಾಡುತ್ತಾ, ನಡೆದು ಹೋದ ಘಟನೆಗೆ ಬಿಂದುವಿಟ್ಟು, ಸೂಕ್ಷ್ಮ ಪರಿಶ್ತಾ & ಮಾಸ್ಟರ್ ಸರ್ವ ಶಕ್ತಿವಂತನಾಗಿ ಪಾತ್ರವನ್ನು ಅಭಿನಯಿಸುತ್ತಿದ್ದೇನೆ.

2. ನಾನು ನನ್ನ ದಿವ್ಯದರ್ಪಣದಿಂದ ಪ್ರತಿಯೊಂದು ಆತ್ಮನಿಗೆ ಮೂರು ಕಾಲಗಳ ಜ್ಞಾನವನ್ನು ಸಾಕ್ಷಾತ್ಕಾರ ಮಾಡಿಸಿ, ಆಸ್ತಿಯನ್ನು (ವಾರಸತ್ವ) ಪಡೆಯಲು ಆಕರ್ಷಿತ ಮಾಡಿದ್ದೇನೆ.

3. ನಾನು ಭಕ್ತಾತ್ಮರೆಲ್ಲರಿಗೂ ತಂದೆಯ ಪರಿಚಯವನ್ನು ಕೊಟ್ಟು ಲೀನ ಸ್ಥಿತಿಯ ಅನುಭವ ಮಾಡಿಸಿ, ಭವಿಷ್ಯ ಲವಲೀನ ಸ್ಥಿತಿಯ ಮಾರ್ಗವನ್ನು ತೋರಿಸಿ ಅವರನ್ನು ತ್ರಿಕಾಲದರ್ಶಿಯನ್ನಾಗಿ ತಯಾರು ಮಾಡಿರುವ ದಿವ್ಯ ದರ್ಪಣವಾಗಿದ್ದೇನೆ.

4. ನಾನು ಸರ್ವಶಕ್ತಿವಂತನಾಗಿ, ಹೃದಯ ಸಿಂಹಾಸನಾಧಿಕಾರಿಯಾಗಿ, ಸಫಲತಾ ಮೂರ್ತಿಯಾಗಿ, ಸ್ಮೃತಿ ಸ್ವರೂಪವಾಗಿರುತ್ತಾ ಇತರರ ಮೂರು ಕಾಲಗಳನ್ನು ತೋರಿಸುವ ದಿವ್ಯ ದರ್ಪಣವಾಗಿದ್ದೇನೆ.